ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education)**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699,**

## 2ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳು

ದಿನಾಂಕ: 09-04-2008,

ಸ್ಥಳ:

ಕೊಠಡಿ ಸಂಖ್ಯೆ:38, ನೆಲಮಹಡಿ,

ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ,

ವಿಕಾಸ ಸೌಧ, ಬೆಂಗಳೂರು

**ದಿನಾಂಕ 9-4-2008 ರಂದು ನಡೆದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆರ್ಥಿಕ ಸಮಿತಿಯ ಸಭೆಯ ನಡವಳಿಗಳು.**

---

1) ದಿನಾಂಕ:9-4-2008ರಂದು ಮಾನ್ಯ ಕಾರ್ಯದರ್ಶಿಗಳು, (ವೈ.ಶಿ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 8ನೇ ಆರ್ಥಿಕ ಸಮಿತಿ ಸಭೆಯ ನಡವಳಿಯನ್ನು ಕಡತದಲ್ಲಿ ಮಂಡಿಸಲಾಗಿದೆ. ದಯಮಾಡಿ ಸದರಿ ನಡವಳಿಯನ್ನು ಅನುಮೋದಿಸಲು ಕೋರಿದೆ.

(ಡಿ .ಕೆ. ಗೋವಿಂದರಾಜು)
ನಿರ್ದೇಶಕರು (ಪ್ರಭಾರ)/ ಪ್ರಾಂಶುಪಾಲರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

2. ಸರ್ಕಾರದ ಕಾರ್ಯದರ್ಶಿಗಳು(ವೈ.ಶಿ)

ಸರ್ಕಾರದ ಕಾರ್ಯದರ್ಶಿ
ವೈದ್ಯಕೀಯ ಶಿಕ್ಷಣ ಇಲಾಖೆ
19/4/08

**HASSAN INSTITUTE OF MEDICAL SCIENCES, HASSAN**

**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ**

(An Autonomous Medical Institution, Government of Karnataka)

SRI CHAMARAJENDRA HOSPITAL, HASSAN – 573201

**ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ - 573 201**

# MEETING RESOLUTIONS

Meeting Notice & Agenda Notes for the

Finance Committee Meeting,

To be held On 09-04-2008 at 11.30 am

Room No. 38, Ground Floor, Vikasa Soudha,

Bangalore-560 001.

Phone/Fax No: 08172-231699

# HASSAN INSTITUTE OF MEDICAL SCIENCES, HASSAN
## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ

(An Autonomous Medical Institution, Government of Karnataka)
SRI CHAMARAJENDRA HOSPITAL, HASSAN – 573201

## ಅಜೆಂಡಾ

| ಕ್ರಮ ಸಂಖ್ಯೆ | ವಿಷಯಗಳು |
|---|---|
| 1 | ಹಿಂದಿನ ಸಭಾ ನಡುವಳಿಗಳನ್ನು ಓದಿ ಅಂಗೀಕರಿಸುವುದು. |
| 2 | 2008-09ನೇ ಸಾಲಿನ ಅಯವ್ಯಯ ಪತ್ರದ ಅನುಮೋದನೆ |
| 3 | 2007-08 ನೇ ಸಾಲಿನ ತಾತ್ಕಾಲಿಕ ಜಮಾ- ಖರ್ಚು ತಖ್ತೆ:ಯ ಪರಿಶೀಲನೆ ಮತ್ತು ಅಂತರಿಕ ಲೆಕ್ಕ ಪರಿಶೋಧನೆ ಮಾಡಿಸುವ ಬಗ್ಗೆ ಅನುಮೋದನೆ. |
| 4 | 2008-09ನೇ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅಗತ್ಯವಿರುವ ಉಪಕರಣ / ಪೀಠೋಪಕರಣ/ ಗ್ರಂಥಾಲಯದ ಪುಸ್ತಕಗಳನ್ನು ಖರೀದಿಸಲು ಟೆಂಡರ್ ಕರೆದಿರುವ ಬಗ್ಗೆ ಅನುಮೋದನೆ |
| 5 | ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ನೆಟ್ ವರ್ಕಿಂಗ್ ವ್ಯವಸ್ಥೆ ಅಳವಡಿಸಲು ಟೆಂಡರ್ ಕರೆಯಲು ಅನುಮೋದನೆ. |
| 6 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ 2008-09ನೇ ಸಾಲಿಗೆ ಆಹಾರ ಪದಾರ್ಥಗಳು/ ಆಸ್ಪತ್ರೆ ಅವಶ್ಯಕ ವಸ್ತುಗಳು ಮತ್ತು ಶೇಕಡ 100 ಭಾಗದ ಪ್ರಥಮ ದರ್ಜೆ ಬ್ರೆಡ್ ಸರಬರಾಜು ಮಾಡಲು ಕರೆದಿರುವ ಟೆಂಡರ್ ಬಗ್ಗೆ ಅನುಮೋದನೆ. |
| 7 | ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರ ಭವಿಷ್ಯ ನಿಧಿ ಪಾವತಿ ಬಗ್ಗೆ. |
| 8 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು |

(ಡಾ. ಡಿ.ಕೆ. ಗೋವಿಂದ ರಾಜು)
ಪ್ರಾಂಶುಪಾಲರು /ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

# ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಸನ

ದಿನಾಂಕ:09-04-2008ರ ಬುಧವಾರ ಬೆಳಗ್ಗೆ 11-30ಗಂಟೆಗೆ ಗೌರವಾನ್ವಿತ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು. ಇವರ ಘನ ಅಧ್ಯಕ್ಷತೆಯಲ್ಲಿ ವಿಕಾಸ ಸೌಧ, ಕೊಠಡಿ ಸಂಖ್ಯೆ: 38ರಲ್ಲಿ ಆರ್ಥಿಕ ಸಮಿತಿ ಸಭೆ ಸೇರಿ ನಡೆಸಿದ ಸಭಾ ನಡುವಳಿಗಳು.

**ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು:**

1. ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು. : ಅಧ್ಯಕ್ಷರು

2. ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. : ಸದಸ್ಯರು

3. ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. : ಸದಸ್ಯರು

4. ಅಪರ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು. : ಸದಸ್ಯರು

5. ನಿರ್ದೇಶಕರು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದ ರಾವ್ ವೃತ್ತ , ಬೆಂಗಳೂರು. : ಸದಸ್ಯರು

6. ಪ್ರಾಂಶುಪಾಲರು/ ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ , ಹಾಸನ. : ಸದಸ್ಯ ಕಾರ್ಯದರ್ಶಿ

# ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಸನ

ದಿನಾಂಕ:09-04-2008ರ ಬುಧವಾರ ಬೆಳಗ್ಗೆ 11-30ಗಂಟೆಗೆ ಗೌರವಾನ್ವಿತ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು. ಇವರ ಘನ ಅಧ್ಯಕ್ಷತೆಯಲ್ಲಿ ವಿಕಾಸ ಸೌಧ, ಕೊಠಡಿ ಸಂಖ್ಯೆ: 38ರಲ್ಲಿ ಆರ್ಥಿಕ ಸಮಿತಿ ಸಭೆ ಸೇರಿ ನಡೆಸಿದ ಸಭಾ ನಡುವಳಿಗಳು.

**ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು:**

| | |
|---|---|
| 1. ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವಿಕಾಸ ಸೌಧ, ಬೆಂಗಳೂರು. | : ಅಧ್ಯಕ್ಷರು |
| 2. ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ,<br>ವಿಧಾನ ಸೌಧ, ಬೆಂಗಳೂರು. | : ಸದಸ್ಯರು |
| 3. ಕಾರ್ಯದರ್ಶಿಗಳು,<br>ಯೋಜನಾ ಇಲಾಖೆ,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು. | : ಸದಸ್ಯರು |
| 4. ಅಪರ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವಿಕಾಸ ಸೌಧ, ಬೆಂಗಳೂರು. | : ಸದಸ್ಯರು |
| 5. ನಿರ್ದೇಶಕರು (ವೈದ್ಯಕೀಯ ಶಿಕ್ಷಣ),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ಆನಂದ ರಾವ್ ವೃತ್ತ , ಬೆಂಗಳೂರು. | : ಸದಸ್ಯರು |
| 6. ಪ್ರಾಂಶುಪಾಲರು/ ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ ,<br>ಹಾಸನ. | : ಸದಸ್ಯ ಕಾರ್ಯದರ್ಶಿ |

| ಅಜೆಂಡಾ ಕ್ರ.ಸಂ. | ವಿಷಯಗಳು | ತೀರ್ಮಾನಗಳು |
|---|---|---|
| 1 | ಹಿಂದಿನ ಸಭಾ ನಡುವಳಿಗಳನ್ನು ಓದಿ ಅಂಗೀಕರಿಸುವುದು. | ಹಿಂದಿನ ಸಭಾ ನಡುವಳಿಗಳನ್ನು ಓದಿ ಅಂಗೀಕರಿಸಲಾಯಿತು.<br>1. ದಿ.27-08-2007ರ ಆರ್ಥಿಕ ಸಮಿತಿಯ ನಡವಳಿಕೆ ಕ್ರಮ ಸಂಖ್ಯೆ:6ರ ಬಗ್ಗೆ ಚರ್ಚಿಸಲಾಯಿತು 2005-06 ಮತ್ತು 2006-07ನೇ ಸಾಲಿನ ಲೆಕ್ಕ ಪತ್ರವನ್ನು ಆಡಿಟ್ ಮಾಡಿಸಿರುವುದನ್ನು ಓದಿ ಅಂಗೀಕರಿಸಲಾಯಿತು. |
| 2 | 2008-09ನೇ ಸಾಲಿನ ಅಯವ್ಯಯ ಪತ್ರದ ಅನುಮೋದನೆ | 2008-09ನೇ ಸಾಲಿನ ಅಯವ್ಯಯ ಪತ್ರದ ನ್ಯೂನ್ಯತೆಯನ್ನು ಸರಿಪಡಿಸಿ ಮರು ಸಲ್ಲಿಸುವಂತೆ ಸೂಚಿಸಲಾಯಿತು. |
| 3 | 2007-08 ನೇ ಸಾಲಿನ ತಾತ್ಕಾಲಿಕ ಜಮಾ- ಖರ್ಚು ತಖ್ತೆ:ಯ ಪರಿಶೀಲನೆ ಮತ್ತು ಅಂತರಿಕ ಲೆಕ್ಕ ಪರಿಶೋಧನೆ ಮಾಡಿಸುವ ಬಗ್ಗೆ ಅನುಮೋದನೆ. | 2007-08 ನೇ ಸಾಲಿನ ತಾತ್ಕಾಲಿಕ ಜಮಾ- ಖರ್ಚು ತಖ್ತೆ:ಯ ಪರಿಶೀಲನೆ ಪರಿಶೀಲಿಸಲಾಯಿತು ಆದರೆ ಸಂಸ್ಥೆಗೆ ಎಲ್ಲಾ ರೀತಿಯಿಂದ ಬರುವ ಆದಾಯ ಮತ್ತು ಖರ್ಚಿನ ವಿವರವನ್ನು ನಮೂದಿಸದಿರುವುದರಿಂದ ಸರಿಪಡಿಸಿ ಸಲ್ಲಿಸುವಂತೆ ಸೂಚಿಸಲಾಯಿತು.<br>ಸಂಸ್ಥೆಯ ಅಂತರಿಕ ಲೆಕ್ಕ ಪರಿಶೋಧನೆ ಮಾಡಿಸಲು ದರಪಟ್ಟಿ ಕರೆದು ಮೂರ ವರ್ಷದ ಅವಧಿಗೆ ಲೆಕ್ಕ-ಪರಿಶೋಧಕರನ್ನು ನೇಮಕಮಾಡಿಕೊಳ್ಳವಂತೆ ತೀರ್ಮಾನಿಸಲಾಯಿತು ಹಾಗೂ ಹಣಕಾಸಿನ ವಿಚಾರವನ್ನು ಮಂಡಿಸುವಾಗ ಸಭೆಗೆ ಲೆಕ್ಕ-ಪರಿಶೋಧಕರನ್ನು ಆಹ್ವಾನಿಸುವಂತೆ ಸೂಚಿಸಲಾಯಿತು. |
| 4 | 2008-09ನೇ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅಗತ್ಯವಿರುವ ಉಪಕರಣ/ ಪೀಠೋಪಕರಣ ಮತ್ತು ಗ್ರಂಥಾಲಯ ಪುಸ್ತಕಗಳನ್ನು ಖರೀದಿಸಲು ಟೆಂಡರ್ ಕರೆದಿರುವ ಬಗ್ಗೆ ಅನುಮೋದನೆ | 2008-09ನೇ ಸಾಲಿನ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ತಪಾಸಣೆಗೆ ಅಗತ್ಯವಿರುವ ಉಪಕರಣ/ಪೀಠೋಪಕರಣ ಮತ್ತು ಗ್ರಂಥಾಲಯ ಪುಸ್ತಕಗಳನ್ನು ಖರೀದಿಸಲು ಟೆಂಡರ್ ಕರೆದಿರುವ ಬಗ್ಗೆ ಕುಲಂಕುಷವಾಗಿ ಪರಿಶಿಲಿಸಲಾಯಿತು.ಹಾಲಿ ಕರೆದಿರುವ ಟೆಂಡರನು ಸಿಂಗಲ್ ಬಿಡ್ ಟೆಂಡರ್ ಮುಖಾಂತರ ಕರೆದಿರುವುದರಿಂದ ಕಾನೂನು ತೊಡಕುಗಳಾಗುತ್ತದೆಂದು ಚರ್ಚಿಸಲಾಯಿತು ಮತ್ತು ಉಪಕರಣಗಳ Specification ಸರಿಯಿಲ್ಲದಿರುವುದು ಹಾಗೂ ಟೆಂಡರ್ ಕರೆಯುವ ಮೊದಲು ಸರ್ಕಾರದಿಂದ ಪೂರ್ವಾನುಮತಿ ಪಡೆಯದೆ ಟೆಂಡರ್ ಪ್ರಕಿಯೆ ನಡೆಸುವುದು ನಿಯಮಕ್ಕೆ ವಿರುದ್ಧವಾಗಿರುತ್ತದೆಂದು ಪರಿಗಣಿಸಿ ಈ |

| | | |
|---|---|---|
| | | ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಿ ಸಂಬಂಧಪಟ್ಟ ಟೆಂಡರ್‌ದಾರರಿಗೆ ಇ.ಎಮ್.ಡಿ ಹಣವನ್ನು ಮರುಪಾವತಿಸುವಂತೆ ಪ್ರಾಂಶುಪಾಲರು/ನಿರ್ದೇಶಕರಿಗೆ ಸೂಚಿಸಿ Short-term ಟೆಂಡರ್ ಕರೆಯಲು ಕಾರ್ಯದರ್ಶಿಯವರಿಗೆ ಪತ್ರ ಬರೆದು ಅನುಮೋದನೆ ಪಡೆಯುವುದೆಂದು ತೀರ್ಮಾನಿಸಲಾಯಿತು.<br><br>Specification ವಿವರವನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು ಇವರಿಂದ ಪಡೆದು ಶ್ರೀ.ಎಸ್.ಜಿ.ಬಾಬುರಾವ್,(ಹೆಚ್.ಇ.ಓ)ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಮಾರ್ಗದರ್ಶನ ಪಡೆದು ಟೆಂಡರ್ ಅಗತ್ಯವಿರುವ ಪ್ರಕ್ರಿಯೆಯನ್ನು ಕೈಗೊಳ್ಳುವಂತೆ ತೀರ್ಮಾನಿಸಲಾಯಿತು. |
| 5 | ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ನೆಟ್ ವರ್ಕಿಂಗ್ ವ್ಯವಸ್ಥೆ ಅಳವಡಿಸಲು ಟೆಂಡರ್ ಕರೆಯಲು ಅನುಮೋದನೆ. | ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಶ್ರೀ ಚಾಮರಾಜೇಂದ್ರ ಆಸ್ಪತ್ರೆ , ನೆಟ್ ವರ್ಕಿಂಗ್ ವ್ಯವಸ್ಥೆ ಅಳವಡಿಸುವ ಬಗ್ಗೆ ಚರ್ಚಿಸಲಾಯಿತು ಈ ವ್ಯವಸ್ಥೆಯಿಂದ ಆಗುವ ಅನುಕೂಲತೆಯ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಪಡೆಯುವಂತೆ ಸೂಚಿಸಲಾಯಿತು . ಹಾರ್ಡ್ ವೇರ್ ಮತ್ತು ಮ್ಯಾನ್ ಪವರ್ ಇತ್ಯಾದಿಗಳ ಬಗ್ಗೆ ಪ್ರತ್ಯೇಕ ಟೆಂಡರ್ ಕರೆಯುವ ಬಗ್ಗೆ ಸೂಚಿಸಿ ಬೆಳಗಾಂ ಮತ್ತು ಮೈಸೂರು ವೈದ್ಯಕೀಯ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿದು ಪಾರದರ್ಶಕ ನಿಯಮದಡಿ ಟೆಂಡರ್ ಕರೆಯಲು ಒಪ್ಪಿ ಅನುಮೋದನೆ ನೀಡಲಾಯಿತು. |
| 6 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ 2008-09ನೇ ಸಾಲಿಗೆ ಆಹಾರ ಪದಾರ್ಥಗಳು/ ಆಸ್ಪತ್ರೆ ಅವಶ್ಯಕ ವಸ್ತುಗಳು ಮತ್ತು ಶೇಕಡ 100 ಭಾಗದ ಪ್ರಥಮ ದರ್ಜೆ ಬ್ರೆಡ್ ಸರಬರಾಜು ಮಾಡಲು ಕರೆದಿರುವ ಟೆಂಡರ್ ಬಗ್ಗೆ ಅನುಮೋದನೆ. | ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ ಇಲ್ಲಿಗೆ 2008-09ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆಯಾಗಬೇಕಾಗಿರುವ ಅನುದಾನವು ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಬಿಡುಗಡೆಯಾಗದಿದ್ದ ಕಾರಣದಿಂದಾಗಿ ಈ ವಿಷಯವನ್ನು ಕೈಬಿಟ್ಟು ಹಿಂದಿನಂತೆಯೇ ನಡೆಯಲು ತೀರ್ಮಾನಿಸಲಾಯಿತು. |

| | | |
|---|---|---|
| 7 | ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಭವಿಷ್ಯ ನಿಧಿ ಪಾವತಿ ಬಗ್ಗೆ | ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಕೆಲಸಕ್ಕೆ ಸೇರಿದ ದಿನಾಂಕದಿಂದ ಭವಿಷ್ಯ ನಿಧಿ ಪಾವತಿ ಮಾಡಬೇಕೆಂದು ಪ್ರವರ್ತನಾಧಿಕಾರಿಗಳು, ನೌಕರರ ಭವಿಷಯ ನಿಧಿ ಇಲಾಖೆ, ಹಾಸನ ಇವರು ನೀಡಿರುವ ಸೂಚನಾ ಪತ್ರದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ನಿಯಮಾನುಸಾರ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಕೆಲಸಕ್ಕೆ ಸೇರಿದ ದಿನಾಂಕದಿಂದ ಭವಿಷ್ಯನಿಧಿ ಬಾಬ್ತನ್ನು ಪಾವತಿಸಬೇಕಾಗಿರುವುದರಿಂದ ಸಿಬ್ಬಂದಿ ವರ್ಗದವರ ಬಾಬ್ತನ್ನು ಮೊದಲು ಸಂಸ್ಥೆಗೆ ಜಮಾ ಮಾಡಿಸಿ ನಂತರ ಎರಡೂ ಬಾಬ್ತನ್ನು ಇಲಾಖೆಗೆ ಪಾವತಿಸುವಂತೆ ಕೂಡಲೆ ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. |
| 8 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು:-<br>1.ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬಾಲಕ ಮತ್ತು ಬಾಲಕಿಯರ ವಸತಿ ನಿಲಯಗಳ Dinning Hallಗೆ ಊಟದ ಟೇಬಲ್ ಮತ್ತು ಕುರ್ಚಿಗಳು, ಪರೀಕ್ಷಾ ಕೊಠಡಿಗೆ ಟೇಬಲ್ ಮತ್ತು ಕುರ್ಚಿಗಳು ಹಾಗೂ ಇತರೆ ಪೀಠೋಪಕರಣಗಳನ್ನು ಟೆಂಡರ್ ಕರೆದು ಖರೀದಿಸುವ ಬಗ್ಗೆ.<br>2.ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಮುದಾಯ ವೈದ್ಯ ಶಾಸ್ತ್ರ ವಿಭಾಗದ ಸಂಖ್ಯಾ ಶಾಸ್ತ್ರ ಉಪನ್ಯಾಸಕರು ಮತ್ತು ವೈದ್ಯಕೀಯ ಸಮಾಜ ಕಾರ್ಯಕರ್ತರ ವೇತನ ನಿಗದಿ ಪಡಿಸುವ ಬಗ್ಗೆ. | 1. ವಿಷಯವನ್ನು ಚರ್ಚಿಸಲಾಯಿತು. Short-term Tender ಕರೆಯಲು ಸರ್ಕಾರದಿಂದ ಅನುಮತಿ ಪಡೆದು ನಂತರ ಟೆಂಡರ್ ಕರೆಯಲು ಪ್ರಾಂಶುಪಾಲರು/ ನಿರ್ದೇಶಕರಿಗೆ ಸೂಚಿಸಲಾಯಿತು. ತಾತ್ಕಾಲಿಕವಾಗಿ Dining Hallಗೆ ಅಗತ್ಯವಿರುವ ಟೇಬಲ್ ಮತ್ತು ಕುರ್ಚಿಗಳು,ಬಾಡಿಗೆ ಆಧಾರದಲ್ಲಿ ಪಡೆಯುವುದೆಂದು ತೀರ್ಮಾನಿಸಲಾಯಿತು.<br>2. ವಿಷಯವನ್ನು ಚರ್ಚಿಸಲಾಯಿತು. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಮುದಾಯ ವೈದ್ಯಶಾಸ್ತ್ರ ವಿಭಾಗದ ಸಂಖ್ಯಾಶಾಸ್ತ್ರ ಉಪನ್ಯಾಸಕರು, ವೈದ್ಯಕೀಯ ಸಮಾಜ ಕಾರ್ಯಕರ್ತರ, Lecturer in Pharmachemist in Bio-Physics ಇವರ ವೇತನ ನಿಗದಿ ಪಡಿಸುವ ಬಗ್ಗೆ ಮತ್ತು M.SC(Medical), Biochemistry, Anatomy, Microbiology ಇವರಿಗೆ ನೀಡುವ Academic allowances, P.G.allowance ನಿಗದಿ ಪಡಿಸುವ ಬಗ್ಗೆ ನಿರ್ದೇಶಕರು (ವೈದ್ಯಕೀಯ ಶಿಕ್ಷಣ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದ ವೃತ್ತ, ಬೆಂಗಳೂರು ಇವರಿಗೆ ಸ್ಪಷ್ಟೀಕರಣ ಕೋರಿ ಪತ್ರ ಬರೆಯುವಂತೆ ತೀರ್ಮಾನಿಸಲಾಯಿತು. |

| | | |
|---|---|---|
| | | 3. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಬೋಧಕೇತರ ಸಿಬ್ಬಂದಿಯವರನ್ನು ನೇಮಕಾತಿ ಮಾಡಿಕೊಳ್ಳಲು ಕೈಗೊಂಡಿರುವ ಕ್ರಮದ ನೇಮಕಾತಿ ಪ್ರಕ್ರಿಯೆ ವಿವರವನ್ನು ಮುಂದಿನ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸುವಂತೆ ಪ್ರಾಂಶುಪಾಲರಿಗೆ ಸೂಚಿಸಲಾಯಿತು.<br>4. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ, ಮುಖ್ಯ ಆಡಳಿತಾಧಿಕಾರಿ ಹಾಗೂ ಮುಖ್ಯ ಆರ್ಥಿಕ ಸಲಹೆಗಾರರು ಖಾಯಂ ಆಗಿ ನೇಮಕಾತಿ ಮಾಡಿಲ್ಲದಿರುವುದರಿಂದ ತಾತ್ಕಾಲಿಕವಾಗಿ ಜಿಲ್ಲಾ ಪಂಚಾಯತ್, ಹಾಸನ ಇಲ್ಲಿಂದ ಇಬ್ಬರು ಅಧಿಕಾರಿಗಳನ್ನು ತಾತ್ಕಲಿಕ ನಿಯೋಜನೆ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್, ಹಾಸನರವರಿಗೆ ದೂರವಾಣಿ ಮೂಲಕ ತಿಳಿಸಲಾಯಿತು ಹಾಗೂ ಲೆಕ್ಕ ಪತ್ರಕ್ಕೆ ಸಂಬಂಧಿಸಿದಂತೆ ಲೆಕ್ಕ- ಪರಿಶೋಧಕರಿಂದ ಸಲಹೆ ಪಡೆಯಲು ಪ್ರಾಂಶುಪಾಲರು/ ನಿರ್ದೇಶಕರಿಗೆ ಸೂಚಿಸಲಾಯಿತು.<br>5. ಭಾರತೀಯ ವೈದ್ಯಕೀಯ ಪರಿಷತ್ತಿನ ತಪಾಸಣೆ ಅತಿ ಶೀಘ್ರದಲ್ಲಿ ಬರುತ್ತಿರುವುದರಿಂದ ಶ್ರೀ ಚಾಮರಾಜೇಂದ್ರ ಆಸ್ಪತ್ರೆಗೆ 40 ಸ್ಟಾಫ್ ನರ್ಸ್ ತುರ್ತಾಗಿ ನೇಮಕ ಮಾಡಿಕೊಳ್ಳುವುದರ ಬಗ್ಗೆ, ವೈದ್ಯಕೀಯ ಅಧೀಕ್ಷಕರು ಮತ್ತು ಜಿಲ್ಲಾ ಶಸ್ತ್ರ ಚಿಕಿತ್ಸಕರು ಸಭೆಗೆ ವಿವರಿಸಿದರು ಸಭೆಯಲ್ಲಿ ಅಗತ್ಯವಿರುವ 40 ಸ್ಟಾಫ್ ನರ್ಸ್‌ಗಳನ್ನು ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ Training Nurse ಎಂದು ಪರಿಗಣಿಸಿ 5000-00ರೂಗಳನ್ನು ಸಂಚಿತವೇತನ ದಡಿಯಲ್ಲಿ ಆಯ್ಕೆ ಮಾಡಿಕೊಳ್ಳಲು ತೀರ್ಮಾನಿಸಲಾಯಿತು. |

ಎಂ. ಸ. 19/5/08

(ಎಮ್.ಕೆ.ಶಂಕರ ಲಿಂಗೇಗೌಡ)
ಅಧ್ಯಕ್ಷರು(ಆರ್ಥಿಕ ಸಮಿತಿ)
ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಬೆಂಗಳೂರು.